ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

**ಶ್ರೀ ಎಂ ಪಿ ಪ್ರಕಾಶ್, (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)**

ಅ) ನಿಜ ಆದರೆ ಸದರಿ ಪ್ರಕರಣದಲ್ಲಿ ಸರ್ಕಾರವು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿ ಈಗಾಗಲೇ ದಿನಾಂಕ 16 1 2007 ರಂದು ಆದೇಶ ಹೊರಡಿಸಿದೆ

ಆ) ನಿಜವಲ್ಲ ಸಾಕ್ಷಿಗಳಿಂದ ಒತ್ತಾಯ ಪೂರ್ವಕವಾಗಿ ಅಥವಾ ಭಯಪಡಿಸಿ ಹೇಳಿಕೆ ಪಡೆಯುವುದು ಸರ್ಕಾರದ ನೀತಿಯಲ್ಲ

ಇ) ಸದರಿ ಪ್ರಕರಣದಲ್ಲಿ ಈಗಾಗಲೇ ಸರ್ಕಾರವು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಕ್ರಮ ಕೈಗೊಂಡಿದೆ

**385 (171) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ)** ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂಗನವಾಡಿ ಕಾರ್ಯಕತಯರಿಗೆ ಕಳೆದ ಎರಡು ವರ್ಷಗಳಿಂದ ಕೊಡುತ್ತಿರುವ ಮಾಸಿಕ ವೇತನವೆಷ್ಟು,

ಆ) ಇಂದಿನ ದಿನಗಳಲ್ಲಿ ಈ ವೇತನದಲ್ಲಿ ಜೀವನ ನಡೆಸಲು ಕಷ್ಟಕರವಾಗಿದ್ದು ಈ ವೇತನದ ಪ್ರಮಾಣವನ್ನು ಹೆಚ್ಚುಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಇ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

**ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) .**

ಅ) ಕಳೆದ ಎರಡು ವರ್ಷಗಳಿಂದ ಕಾರ್ಯಕರ್ತೆಯರಿಗೆ ಕೇಂದ್ರ ಸರ್ಕಾರದ ವತಿಯಿಂದ ಮಾಹೆಯಾನ ರೂ 1,000/ ಹಾಗೂ ಸಹಾಯಕಿಯರಿಗೆ ರೂ 500/– ನೀಡಲಾಗುತ್ತಿದೆ ಮತ್ತು ರಾಜ್ಯ ಸರ್ಕಾರದ ವತಿಯಿಂದ 2005–06ರವರೆಗೆ ಕಾರ್ಯಕರ್ತೆಯರಿಗೆ ರೂ 450/– ಹಾಗೂ ಸಹಾಯಕಿಯರಿಗೆ ರೂ 225/– ನೀಡುತ್ತಿದ್ದು, 2006–07ನೇ ಸಾಲಿನಲ್ಲಿ ಈ ಮೊತ್ತವನ್ನು ಅನುಕ್ರಮವಾಗಿ 550/– ಹಾಗೂ 275/–ಕ್ಕೆ ಹೆಚ್ಚಿಸಿರುತ್ತದೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲು ಭಾಗ್ಯಲಕ್ಷ್ಮೀ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಲು ಮತ್ತು ಮುಂದಿನ ಕ್ರಮವನ್ನು ಕೈಗೆತ್ತಿಕೊಳ್ಳಲು ಹಾಗೂ ಆರೋಗ್ಯ ಇಲಾಖೆಯ ರೋಗ ನಿರೋಧಕ

ಚಿಕಿತ್ಸೆ ಮತ್ತು 'ಜನನಿ ಸುರಕ್ಷಾ ಯೋಜನೆ' ಇತ್ಯಾದಿ ಯೋಜನೆಗಳಡಿಯಲ್ಲಿನ ಕಾರ್ಯನಿರ್ವಹಣೆಗಾಗಿ ಹೆಚ್ಚುವರಿ ಸಂಭಾವನೆಗಳನ್ನು ನೀಡಲಾಗುತ್ತಿದೆ

ಆ) ರಾಜ್ಯ ಸರ್ಕಾರ ನೀಡುತ್ತಿರುವ ಗೌರವಧನವನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ

ಇ) ಅನ್ವಯಿಸುವುದಿಲ್ಲ

**386 (659) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)** : ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಇರುವ ಆರ್ ಟಿ ಒ ಮತ್ತು ಎ ಆರ್ ಟಿ ಒ ಕಛೇರಿಗಳ ಸಂಖ್ಯೆ ಎಷ್ಟು, ಇವು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ,

ಆ) ಈ ಕಛೇರಿಗಳನ್ನು ಪ್ರಾರಂಭಿಸುವಾಗ ಅನುಸರಿಸುವ ಮಾನದಂಡಗಳೇನು,

ಇ) ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಛೇರಿಗಳು ಕಾರ್ಯನಿರ್ವಹಿಸುತ್ತಿರುವುದು ನಿಜವಲ್ಲವೆ,

ಈ) ಹಾಗಿದ್ದಲ್ಲಿ ಬಸವಕಲ್ಯಾಣದಿಂದ ಸಾರ್ವಜನಿಕರು ವಾಹನ ನೊಂದಣಿಗೆ 30–40 ಕಿ ಮೀ ದೂರಕ್ಕೆ ಹೋಗುವ ಪರಿಸ್ಥಿತಿ ಇರುವುದರಿಂದ ಬಸವಕಲ್ಯಾಣದಲ್ಲಿಯೇ ಒಂದು ಎ ಆರ್ ಟಿ ಒ ಕಟೇರಿಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ,

ಉ) ಇಲ್ಲದಿದ್ದಲ್ಲಿ ಕಾರಣಗಳೇನು, ಈ ಸಂಬಂಧವಾಗಿ ಇದುವರೆವಿಗೆ ಎಷ್ಟು ಸಭೆಗಳನ್ನು ನಡೆಸಲಾಗಿದೆ,

ಊ) ಯಾವಾಗ ಎ ಆರ್ ಟಿ ಒ ಕಛೇರಿಯನ್ನು ಇಲ್ಲಿ ತೆರೆಯಲಾಗುವುದು?

**ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)**:

ಅ) ಬೀದರ್ ನಲ್ಲಿ ಒಂದು ಪ್ರಾದೇಶಿಕ ಸಾರಿಗೆ ಕಛೇರಿ ಬಾಲ್ಕಿಯಲ್ಲಿ ಒಂದು ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ

ಆ) ವಾಹನಗಳ ಸಂಖ್ಯಾಬಲ ಮತ್ತು ರಾಜಸ್ವ ಸಂಗ್ರಹಣೆ ಮುಂತಾದವುಗಳನ್ನು ಗಮನದಲ್ಲಿ ಇರಿಸಿಕೊಂಡು ಕಛೇರಿ

ಇ) ಹೌದು

ಈ) ಸರ್ಕಾರದ ಪರಿಶೀಲನೆಯಲ್ಲಿದೆ

ಉ) ಉದ್ಭವಿಸುವುದಿಲ್ಲ

ಊ) ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ